# ಗಂಗರಸ: ಮೈಲಾರದ ಶಾಸನೋಕ್ತ ವಿಜಯನಗರ ಅಧಿಕಾರಿ

ಎನ್. ಎಸ್. ವೀರೇಶ ಉತ್ತಂಗಿ

ಉಪನ್ಯಾಸಕರು, ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ.

**Received: 15-02-2024 ; Accepted: 16-03-2024 ; Published: 07-05-2024**

**DOI: https://doi.org/10.5281/zenodo.11127021**

## ABSTRACT:

ವಿಜಯನಗರ ಸಾಮ್ರಾಟರ ಆಡಳಿತವು ಅತ್ಯಂತ ವೈಭವದಿಂದ ನಡೆದಿರುವುದು ಅವರ ಕೈಕೆಳಗಿನ ಅಧಿಕಾರಿಗಳಿಂದ. ಅವರು ಆಡಳಿತಾಧಿಕಾರಿಗಳಾಗಿರಬಹುದು, ಅಥವಾ ಸೇನಾಧಿಕಾರಿಗಳಾಗಿರಬಹುದು ಅಥವಾ ಭಂಡಾರದ ಅಧಿಕಾರಿಗಳಾಗಿರಬಹುದು ಅಥವಾ ಸ್ಥಳೀಯ ಅಧಿಕಾರಿಗಳಾಗಿರಬಹುದು. ಇಂಥ ಅಧಿಕಾರಿಗಳು ತಮ್ಮ ಶ್ರದ್ಧೆ, ನಿಷ್ಠೆ, ಪ್ರಾಮಾಣಿಕತನದಿಂದ ಸಾಮ್ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಅಂಥ ಪ್ರಾಮಾಣಿಕ ಅಧಿಕಾರಿಗಳಲ್ಲಿ ಮೈಲಾರದ ಮೈಲಾರಲಿಂಗೇಶ್ವರ ದೇವಾಲಯದ ಭಂಡಾರದ ಅಧಿಕಾರಿ ಗಂಗರಸನೂ ಒಬ್ಬ. ಈತ ವಂಶಪಾರಂಪರ್ಯ ಭಂಡಾರಿಯಾಗಿದ್ದಾನೆ. ತನಗೆ ಬಂದ ಆದಾಯದಲ್ಲಿ ಅನೇಕ ಅಭಿವೃದ್ಧಿ ಕೆಲಸ ಮಾಡಿದ್ದಾನೆ. ಈತನು ವಿಜಯನಗರ ಸಂಗಮ ದೊರೆಗಳಾದ 1ನೇ ದೇವರಾಯ, ವಿಜಯರಾಯ ಮತ್ತು 2ನೇ ದೇವರಾಯನ ಆಳ್ವಿಕೆಯಲ್ಲಿ ಭಂಡಾರಿಯಾಗಿ ಕಾರ್ಯನಿರ್ವಹಿಸಿದ್ದಾನೆ.

## KEYWORDS:

ಮೈಲಾರ, ಭಂಡಾರಿ, ದೇವರಾಯ, ನಾಗಣ್ಣ, ಹೆಗ್ಗಡೆದೇವರಸ, ಗಂಗರಸ, ಗಂಗಣಾಖ್ಯ.

ವಿಜಯನಗರವು ದಕ್ಷಿಣ ಭಾರತದ ಬಹುದೊಡ್ಡ ಸಾಮ್ರಾಜ್ಯ. ಇದರ ಅಡಿಯಲ್ಲಿ ಅನೇಕ ಪ್ರಾಂತಗಳು, ಪಾಳೇಪಟ್ಟುಗಳು, ಸೀಮೆಗಳು, ನಾಡುಗಳು, ಕಾರ್ಯನಿರ್ವಹಿಸುತ್ತಿದ್ದವು. ಅನೇಕ ಸಾಮಂತರು, ಪಾಳೇಗಾರರು ಅಮಾತ್ಯರು, ಅಧಿಕಾರಿಗಳು ಸಾಮ್ರಾಜ್ಯದ ಏಳಿಗೆಗೆ ದುಡಿಯುತ್ತಿದ್ದರು. ಪ್ರತಿಯೊಬ್ಬ ಅಧಿಕಾರಿಯೂ ಸಾಮ್ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದುದನ್ನು ಕಾಣಬಹುದು. ಕೆಲ ಅಧಿಕಾರಿಗಳು ರಾಜಧಾನಿಯಲ್ಲಿ, ಕೆಲವು ಅಧಿಕಾರಿಗಳು ಪ್ರಾಂತಗಳಲ್ಲಿ. ಸೀಮೆಗಳಲ್ಲಿ, ನಾಡುಗಳಲ್ಲಿ, ಅರಸರ ಆಜ್ಞೆಯಂತೆ ಕಾರ್ಯನಿರ್ವಹಿಸುತ್ತಿದ್ದರು. ಅಂಥ ಅಧಿಕಾರಿಗಳಲ್ಲಿ ಗಂಗರಸನೂ ಒಬ್ಬ. ಗಂಗರಸನು ಹೂವಿನಹಡಗಲಿ ತಾಲೂಕಿನ ಮೈಲಾರದ ಗ್ರಾಮದವನಿರಬೇಕು. ಏಕೆಂದರೆ ಅವನು ಹಲವಾರು


ವರ್ಷಗಳಿಂದ ಮೈಲಾರದೇವರ ಭಂಡಾರಿಯಾಗಿ ಕಾರ್ಯನಿರ್ವಹಿಸಿರುವುದು ಶಾಸನಗಳಿಂದ ತಿಳಿದುಬರುತ್ತದೆ.

ಗಂಗರಸನು ವಿಜಯನಗರ ಸಾಮ್ರಾಟರಾದ 1ನೇ ದೇವರಾಯ, ವಿಜಯರಾಯ ಮತ್ತು ಇವನ ಮಗ ಎರಡನೆಯ ದೇವರಾಯನ ಆಳ್ವಿಕೆಯ ಅಂತ್ಯದವರೆಗೆ ಮೈಲಾರದೇವರ ಭಂಡಾರದ ಅಧಿಕಾರಿಯಾಗಿ ಕಾರ್ಯನಿರ್ವಹಿಸಿರುವುದು ಕ್ರಿ. ಶ. 1412 ರಿಂದ ಕ್ರಿ. ಶ. 1449 ರವರೆಗಿನ ಶಾಸನಗಳಿಂದ ತಿಳಿದು ಬರುತ್ತದೆ. ಗಂಗರಸನನ್ನು ಕುರಿತು ಶಾಸನಗಳಲ್ಲಿ ಗಂಗರಸ, ಗಂಗಯ್ಯ, ಗಂಗಣಾಖ್ಯ, ಗಂಗಣಾಮಾತ್ಯ ಗಂಗಣಪ್ರಭುಣಾ, ಎಂದು ದಾಖಲಿಸಲಾಗಿದೆ.

ಗಂಗರಸನು ಜನ್ಮತಃ ಮೈಲಾರದವನು. ಅವನ ವಂಶಾವಳಿಯನ್ನು ಮೈಲಾರಗ್ರಾಮದ ಮೈಲಾರಲಿಂಗೇಶ್ವರ ದೇವಾಲಯದ ರಂಗಮಂಟಪದ ಉತ್ತರ ಬದಿಯ ಕಂಬದ ಮೇಲಿರುವ ಕ್ರಿ. ಶ. 1449ರ ಶಾಸನವು

**"(ಗವು)ತಮ ಗೋತ್ರ ರುಕು ಶಾಖೆಯ ತ್ರಿಕಾಂಡಿಯ ನಾಗ**
**ಪಯ್ಯಗಳ ಮಕ್ಕಳು ಹೆಗ್ಗಡೆ ದೇವರಸರ ತಂಮ್ಮಂದಿರು**
**ಶ್ರೀಮಯಿಲಾರ ದೇವರ ನಿಜಭಕ್ತರಾದ ಅಧಿಕಾರಿ ಗಂಗರ್ಸರು..."[1]**

ಎಂದು ದಾಖಲಿಸುತ್ತದೆ. ಈ ಶಾಸನದ ಪ್ರಕಾರ ಗಂಗರಸನ ವಂಶಾವಳಿಯನ್ನು ಹೀಗೆ ನೋಡಬಹುದು.




ಈ ಶಾಸನವನ್ನು ಗಮನಿಸಿದಾಗ ತ್ರಿಕಾಂಡಿ ನಾಗಣ್ಣನಿಗೆ ಇಬ್ಬರು ಗಂಡು ಮಕ್ಕಳಿದ್ದು, ಅದರಲ್ಲಿ ಹೆಗ್ಗಡೆದೇವರಸ ಹಿರಿಯ ಮಗ, ಗಂಗರಸ ಕಿರಿಯ ಮಗನೆಂದು ತಿಳಿದುಬರುತ್ತದೆ. 'ತ್ರಿಕಾಂಡಿ' ಎಂಬುದು ಗಂಗರಸನ ಮನೆತನದ ಹೆಸರಾಗಿರಬೇಕೆಂದು ತೋರುತ್ತದೆ. ಈ ಶಾಸನದಲ್ಲಿ ಗಂಗರಸನನ್ನು ಕೇವಲ ಅಧಿಕಾರಿಯೆಂದು ಮಾತ್ರ ಕರೆಯಲಾಗಿದೆ. ಈತನು ಗೌತಮ ಗೋತ್ರದವನಾಗಿದ್ದು ಹೆಗ್ಗಡೆದೇವರಿಗೆ ಶಿಲಾಮಂಟಪ ಕಟ್ಟಿಸಿದ್ದನ್ನು ಉಲ್ಲೇಖಿಸುತ್ತದೆ. ಕ್ರಿ. ಶ. 1412ರ ಮೈಲಾರದ ಶಾಸನವು ಗಂಗರಸನನ್ನು ಕುರಿತು ಹೀಗೆ ಉಲ್ಲೇಖಿಸುತ್ತದೆ.

**"...ಶಕ ವರುಷ 1334ನೆಯ ದುಂದುಭಿ ಸಂವತ್ಸರದ ಮಾರ್ಗಶಿರ**
**ಶುರ್ದ್ಧ ಆ... ವಾರದಲ್ಲೂ ಶ್ರೀಮತು ಗಉತಮ ಗೋ(ತ್ರ)ದ ರುಕು**
**ಶಾಖೆಯ ತ್ರಿಕಾಂಡೆಯ ನಾಗಂಣಗಳ ಮಕ್ಕಳು ಶ್ರೀಮಯಿಲಾರ**

**ದೇವರ ಭಂಡಾರದ ಅಧಿಕಾರಿ ಗಂಗರಸರು ಮಾಡಿಸಿದ..."[2]**

ಎಂದು ಉಲ್ಲೇಖಿಸಿದೆ. ಇದು ಗಂಗರಸನನ್ನು ಉಲ್ಲೇಖಿಸುವ ಮೈಲಾರದ ಮೊದಲ ಶಾಸನವಾಗಿದೆ. ಗಂಗರಸನು ಕ್ರಿ. ಶ. 12. 11. 1412ರಲ್ಲಿ ಮೈಲಾರದೇವರ ಭಂಡಾರದ ಅಧಿಕಾರಿಯಾಗಿದ್ದು, ಮಾಳಲದೇವಿಗೆ ಸುಖನಾಶಿ ಮತ್ತು ನವರಂಗ ಮಂಟಪವನ್ನು ಕಟ್ಟಿಸಿದ್ದನ್ನು ಗಮನಿಸಿದರೆ, ಗಂಗರಸನು ಮೈಲಾರದೇವರ ಭಂಡಾರದ ಅಧಿಕಾರಿಯಾಗಿ ಹಲವು ವರ್ಷಗಳಾಗಿದ್ದು ತುಂಬಾ ಪ್ರಬಲನಾಗಿದ್ದಂತೆ ತೋರುತ್ತದೆ. ಕ್ರಿ.ಶ. 1412 ನಂತರದಿಂದ ಕ್ರಿ.ಶ. 1443ರವರೆಗೆ ಈತನನ್ನು ಕುರಿತು ಯಾವ ಮಾಹಿತಿಯೂ ದೊರೆಯುವುದಿಲ್ಲ. ಬಹುಶಃ ಈತ ಪ್ರೌಢದೇವರಾಯನ ಹತ್ತಿರವಿದ್ದು ಆತನಿಗೆ ಅಮಾತ್ಯನಾಗಿ ಇಲ್ಲವೆ ದಂಡನಾಯಕನಾಗಿ ಕಾರ್ಯ ನಿರ್ವಹಿಸಿರುವ ಸಾಧ್ಯತೆ ಇದೆ. ಈತನನ್ನು ಕುರಿತು ಮತ್ತೆ ಮೈಲಾರದ ಕ್ರಿ.ಶ. 1443ರ ಶಾಸನವು

**"...ಶಕ ವರುಷ 1365ನೆಯ ರುಧಿರೊದ್ಗಾರಿ ಸಂವತ್ಸರ ಮಾರ್ಗ ಸುರ್ದ್ಧ**
**ಬುದುಲು ಗಉತಮ ಗೋತ್ರದ ರುಕುಶಾಖೆಯ ತ್ರಿಕಾಂಡೆಯ**
**ನಾಗಂಣಗಳ ಮಕ್ಕಳು ಶ್ರೀಮಯಿಲಾರದೇವರ ಭಂಡಾರದ ಅಧಿಕಾರಿ**
**ಗಂಗಯ್ಯನು ಮಾಡಿಸಿದ ಶ್ರೀಹೆಗ್ಗಡೆದೇವರ ಶಿಲಾಮಂಟಪ..."[3]**

ಎಂದು ಉಲ್ಲೇಖಿಸಿದೆ. ಈ ಶಾಸನವು ದಿನಾಂಕ 28. 11. 1443ರಲ್ಲಿ ರಚಿತವಾಗಿದ್ದು ಮೈಲಾರದೇವರ ಭಂಡಾರದ ಅಧಿಕಾರಿ ಗೌತಮಗೋತ್ರದ ರುಕು ಶಾಖೆಯ ತ್ರಿಕಾಂಡೆಯ ನಾಗಣ್ಣನ ಮಗ ಹೆಗ್ಗಡೆ ದೇವರಿಗೆ ಕಲ್ಲಿನ ಮಂಟಪವನ್ನು ಕಟ್ಟಿಸಿರುವುದನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಬರುವ ಹೆಗ್ಗಡೆದೇವರು ಬಹುಶಃ ಗಂಗರಸನ ಅಣ್ಣ ಹೆಗ್ಗಡೆದೇವರಸ ಆಗಿರಬಹುದೆ? ಎಂಬ ಸಂಶಯ ಮೂಡುವಂತೆ ಮಾಡುತ್ತದೆ. ಏಕೆಂದರೆ ಇದೇ ಗಂಗರಸ ಕ್ರಿ.ಶ. 1446ರಲ್ಲಿ ಇದೇ ದೇವರಿಗೆ ಕಲ್ಲಿನ ರಂಗಮಂಟಪವನ್ನು ನಿರ್ಮಿಸಿದ್ದನ್ನು ಶಾಸನವು

**"ಶ್ರೀವೀರ ಪ್ರತಾಪ ಪ್ರಉಢದೇವರಾಯ ಮಹಾರಾಯರ**
**ಶ್ರೀಮಂನ್ಮಹಾಪ್ರಧಾನಂ ಸಿರಿಗಂಣ ದಂಣಾಯಕ ಒಡೆಯರ**
**ನಿರೂಪದಿಂ... ನಾಗಪ್ಪಯ್ಯಗಳ ಮಕ್ಕಳ ಹೆಗ್ಗಡೆದೆವರಸರ**
**ತಂಮ್ಮಂದಿರು ಶ್ರೀಮಯಿಲಾರದೇವರ ನಿಜಭಕ್ತರಾದ**
**ಅಧಿಕಾರಿ ಗಂಗರ್ಸರು ಮಾಡ್ಸಿದ ಶಿಲಾಮಂಟಪಕ್ಕೆ..."[4]**

ಎಂದು ಉಲ್ಲೇಖಿಸಿದೆ. ಗಂಗರಸನು ಕ್ರಿ.ಶ. 1446ರಲ್ಲಿ ವಿಜಯನಗರ ಚಕ್ರವರ್ತಿ ಶ್ರೀವೀರಪ್ರತಾಪ ಪ್ರೌಢದೇವರಾಯನ ಮಹಾಪ್ರಧಾನ ಸಿಂಗಣ್ಣ ದಂಡನಾಯಕನ ಆದೇಶದಂತೆ ನಾಗಪ್ಪಯ್ಯನ ಮಗ ಹೆಗ್ಗಡೆದೇವರಸನ ತಮ್ಮ

ಗಂಗರಸನು ಹೆಗ್ಗಡೆದೇವರಿಗೆ ಕಲ್ಲಿನ ರಂಗಮಂಟಪವನ್ನು ಕಟ್ಟಿಸಿರುವುದನ್ನು ಕಾಣಬಹುದು. ಕ್ರಿ. ಶ. 1443ರಲ್ಲಿ ಗಂಗರಸನು ಹೆಗ್ಗಡೆದೇವರಿಗೆ ಶಿಲಾಮಂಟಪ ನಿರ್ಮಿಸಿದರೆ ಸಿಂಗಣ್ಣ ದಂಡನಾಯಕನ ಆದೇಶದಂತೆ ಕ್ರಿ.ಶ. 1446ರಲ್ಲಿ ಅದೇ ದೇವರಿಗೆ ಕಲ್ಲಿನರಂಗಮಂಟಪ ಕಟ್ಟಿಸಿದ್ದನ್ನು ನೋಡಬಹುದು.

ಹೆಗ್ಗಡೆದೇವರಸನು ಪ್ರೌಢದೇವರಾಯ ಮತ್ತು ಸಿಂಗಣ್ಣ ದಂಡನಾಯಕನ ಆಪ್ತವಲಯದಲ್ಲಿ ಗುರುತಿಸಿಕೊಂಡು ವಿಶ್ವಾಸಗಳಿಸಿದಂತೆ ತೋರುತ್ತದೆ. ಆತ ಯಾವುದೋ ಯುದ್ಧದಲ್ಲಿ ಅರಸನಪರವಾಗಿ ಹೋರಾಡಿ ಅರಸನಿಗೆ ವಿಜಯ ತಂದುಕೊಟ್ಟಿರಬಹುದು. ಜೊತೆಗೆ ಊರಿನ ಮಹಾಜನಗಳಿಗೆ ಹೆಗ್ಗಡೆಯಾಗಿ, ಮೈಲಾರದೇವರ ಪ್ರಧಾನ ಅರ್ಚಕನಾಗಿ ಕಾರ್ಯನಿರ್ವಹಿಸಿ ಜನರ ಮತ್ತು ಅರಸನ ಪ್ರೀತಿಗೆ ಪಾತ್ರನಾಗಿ ಕ್ರಿ. ಶ. 1442–43ರಲ್ಲಿ ಸತ್ತಿರಬಹುದು. ಊರಿನ ಸಮಸ್ತರ ಅಭಿಲಾಸೆಯಂತೆ ಆತನ ಹೆಸರಿನಲ್ಲಿ ದೇವಾಲಯ ನಿರ್ಮಿಸಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಗಂಗರಸ ಬಹಳ ಪ್ರಬಲನಾಗಿದ್ದರೂ. ಕ್ರಿ. ಶ. 1446ರ ಶಾಸನವು ಆತನನ್ನು ಹೆಗ್ಗಡೆದೇವರಸರ ತಮ್ಮನೆಂದು ಮಾತ್ರ ಕರೆದಿರುವುದು ಕಂಡುಬರುತ್ತದೆ.

ಇದೇ ಹೆಗ್ಗಪ್ಪ ದೇವರಗುಡಿಯ ರಂಗ ಮಂಟಪದಲ್ಲಿ ಮುಂಬದಿಯ ದಕ್ಷಿಣ ಕಂಬದಲ್ಲಿನ ಪೂರ್ವ ಮುಖದ ಇದೇ ಕಾಲದ ಸಂಸ್ಕೃತ ಶಾಸನವು:

**"ನಿತ್ಯಂ ಶಿಲಾಮಂಡಪ: ಮೈಲಾರಾಖ್ಯ ಶಿವಸ್ಯಸಾಧು ಕೃತೀನಾ**
**ಭಕ್ತ್ಯಾತದೇಗ್ರಯಾ ಶಾಕಾಬ್ದೇನಳ... ಸಂಪದಾವಿಜಯತಾಂ**
**ಶ್ರೀಗಂಗಣಾಖ್ಯೋಕೃತ: ಮೈಲಾರಾಖ್ಯ ಗಿರೀಶಸ್ಯ ಗಂಗಣ**
**ಪ್ರಭುಣಾ... ಶಿಲಾಭಿರ್ಮ್ಮಂಟಪಾಂ ನಿತ್ಯತಂ**
**ಪ್ರೀತೋಮಲ್ಲಾರಿ ಶಂಕರಂ:॥ ಗಂಗಾಣಾಮಾತ್ಯೇತೇಭದ್ರಂ..."[5]**

ಎಂದಿದೆ. ಈ ಶಾಸನವು ಮೈಲಾರದೇವರಿಗೆ ಶಿಲಾಮಂಟಪ ಕಟ್ಟಿಸಿದ ಗಂಗರಸನನ್ನು ಗಂಗಣಾಖ್ಯ, ಗಂಗಣ್ಣಪ್ರಭು, ಗಂಗಣಾಮಾತ್ಯ ಎಂದು ವಿಶಿಷ್ಟ ಹೆಸರುಗಳ ಮೂಲಕ ಕರೆದಿದ್ದರ ಜೊತೆಗೆ 'ಶಿವಸ್ಯಸಾಧು' ಎಂದಿರುವುದು ವಿಶೇಷ. ಗಂಗರಸನನ್ನು ಗಂಗಣ್ಣಪ್ರಭು, ಗಂಗಣ್ಣಾಮಾತ್ಯ ಎಂದು ಕರೆದಿರುವುದನ್ನು ಗಮನಿಸಿದರೆ ಅವನು ಪ್ರೌಢದೇವರಾಯನ ಮಂತ್ರಿ. ಹಾಗೂ ಯಾವುದೋ ಆಡಳಿತ ವಿಭಾಗದ ಆಡಳಿತಾಧಿಕಾರಿಯಾಗಿಯೂ ಕಾರ್ಯನಿರ್ವಹಿಸಿದ್ದಂತೆ ತೋರುತ್ತದೆ.

ಇದೇ ಹೆಗ್ಗಪ್ಪದೇವರಗುಡಿಯ ರಂಗಮಂಟಪದಲ್ಲಿನ ಮುಂಬದಿಯ ದಕ್ಷಿಣಕಂಬದಲ್ಲಿ ಉತ್ತರಮುಖದ ಕಾಲನಮೂದಿಲ್ಲದ ಶಾಸನವು

"... ತುಂಗಭದ್ರಾ ಸಮೀಪಸ್ಯ ಮೈಲಾರ ಪರಮೇಶಿತುಃ
ಪುರತೋ ಗಂಗಣಾಖ್ಯೇನೇ ನಿರ್ಮೇತಿ ರಂಗಮಂಟಪಪಂ॥
ಚಿತ್ರತೊರಣ ಸಂಯುಕ್ತಂ ಚತುಸ್ತಂಭವಿರಾಜಿತಂ
ವಾತಾಯನೇನ ರಚಿತಂಮಂಟಪಂ ಗುಣಶೋಭಿತಂ..."[6]

ಎಂದು ಉಲ್ಲೇಖಿಸಿದೆ. ಬಹುಶಃ ಈ ಶಾಸನವು ಕ್ರಿ. ಶ. 1446ರಲ್ಲಿ ರಚಿತವಾಗಿರಬೇಕು. ಪ್ರೌಢದೇವರಾಯನ ಆಳ್ವಿಕೆಯಲ್ಲಿ ಗಂಗರಸನು ಇನ್ನೂ ಬಹುದೊಡ್ಡ ಹುದ್ದೆಯಲ್ಲಿರುವಾಗ ಮೈಲಾರದೇವರಿಗೆ ಹೊಸದಾಗಿ ಮಂಟಪ ಕಟ್ಟಿಸಿದನು. ಈ ಮಂಟಪವು ರಂಗಮಂಟಪ, ಚಿತ್ರತೋರಣ ವಾತಾಯನ ಹಾಗೂ ವಿವಿಧ ದೇವರುಗಳನ್ನು ಒಳಗೊಂಡಿದೆ. ಇಂಥ ದೊಡ್ಡದಾದ ಮಂಟಪ ಕಟ್ಟಿಸುವ ಸಾಮರ್ಥ್ಯ ಹೊಂದಿದ್ದ ಗಂಗರಸನು ಮೈಲಾರದೇವರ ಭಂಡಾರದ ಅಧಿಕಾರಿ ಹುದ್ದೆಯ ಜೊತೆಗೆ ದೊಡ ್ಡಹುದ್ದೆ ಅಲಂಕರಿಸಿದಂತೆ ತೋರುತ್ತದೆ. ಆದರೆ ಈ ಶಾಸನದಲ್ಲಿ ಗಂಗರಸನು ಯಾವ ಅಧಿಕಾರಿ ಸ್ಥಾನದಲ್ಲಿದ್ದನೆಂದು ತಿಳಿಸದೆ ಮೌನವಹಿಸಿದೆ.

ಒಟ್ಟಾರೆಯಾಗಿ ಹೇಳುವುದಾದರೆ ಗಂಗರಸನು ಮೈಲಾರ ಗ್ರಾಮದವನಾಗಿದ್ದು, ಗೌತಮ ಗೋತ್ರದ ರುಕುಶಾಖೆಯ ಬ್ರಾಹ್ಮಣ ಕುಲಕ್ಕೆ ಸೇರಿದ 'ತ್ರಿಕಾಂಡೆ'ವಂಶಕ್ಕೆ ಸೇರಿದವನಾಗಿದ್ದಾನೆ. ಈತನ ತಂದೆ ನಾಗಣ್ಣನು ವೇದಗಳಿಗೆ ವ್ಯಾಖ್ಯಾನ ನೀಡುವ ವಿದ್ವಾಂಸನಾಗಿದ್ದಂತೆ ತೋರುತ್ತದೆ. ನಾಗಣ್ಣನೂ ಸಹ ವಂಶಪಾರಂಪರ್ಯವಾಗಿ ಮೈಲಾರದೇವರ ಭಂಡಾರದ ಅಧಿಕಾರಿಯಾಗಿ ಕಾರ್ಯನಿರ್ವಹಿಸಿರುವ ಸಾಧ್ಯತೆ ಇದೆ. ನಂತರ ಆ ಹುದ್ದೆಯಲ್ಲಿ ಹೆಗ್ಗಡೆ ದೇವರ ಸೇವೆಯನ್ನು ಶ್ರದ್ದೆ ನಿಷ್ಠೆಯಿಂದ ನಿರ್ವಹಿಸಿ ಅರಸನ ಕೃಪೆಗೆ ಪಾತ್ರನಾಗಿ ದೊಡ್ಡಹುದ್ದೆ ಅಲಂಕರಿಸಿರಬೇಕು. ಬಹುಶಃ ಅವನು ಆ ಪ್ರಾಂತದ ಹೆಗ್ಗಡೆ ಹುದ್ದೆ ಅಲಂಕರಿಸಿರಬೇಕು. ಆ ನಂತರ ಗಂಗರಸನು ಮೈಲಾರದೇವರ ಭಂಡಾರದ ಅಧಿಕಾರಿಯಾಗಿ ಸತ್ಯ ನಿಷ್ಠೆಯಿಂದ ಕಾರ್ಯನಿರ್ವಹಿಸಿ ಅರಸನ ಮೆಚ್ಚುಗೆಗೆ ಪಾತ್ರನಾಗಿ ಭಂಡಾರದ ಅಧಿಕಾರಿ ಹುದ್ದೆಯ ಜೊತೆಗೆ ಅಮಾತ್ಯ, ಪ್ರಾಂತಾಧಿಕಾರಿಯಾಗಿಯೂ ಕೆಲಸಮಾಡಿರಬೇಕು. ಇವನು 1ನೇ ದೇವರಾಯನಿಂದ ಹಿಡಿದು ವಿಜಯರಾಯ ಅವನ ಮಗ ಎರಡನೇ ದೇವರಾಯನ ಆಳ್ವಿಕೆ ಮುಗಿಯುವರೆಗೆ ಅಧಿಕಾರದಲ್ಲಿದ್ದು ಮೈಲಾರದೇವರ, ಹೆಗ್ಗಡೆದೇವರ ಗುಡಿಗಳ ಅಭಿವೃದ್ಧಿಗೆ ಶ್ರಮಿಸಿದಂತೆ ತೋರುತ್ತದೆ.

ಕ್ರಿ. ಶ. 11ನೇ ಶತಮಾನದ ಹೊಳಗುಂದಿ ಶಾಸನದಲ್ಲಿ ಹಾಗೂ ಬಾಗಳಿ ಶಾಸನದಲ್ಲಿ ಗಂಗರಸನ ಉಲ್ಲೇಖ ಬರುತ್ತದೆ. ಹೊಳಗುಂದಿ, ಬಾಗಳಿಗಳು ಮೈಲಾರ ಪರಿಸರದಲ್ಲಿವೆ. ಈ ಗ್ರಾಮಗಳ ಶಾಸನಗಳಲ್ಲಿ ಬರುವ ಗಂಗರಸನು

ಮೈಲಾರದ ಗಂಗರಸನ ಮೂಲ ಪುರುಷನಾಗಿರಬೇಕು. ಗಂಗರಸನ ವಂಶಜರು ವಂಶಪಾರಂಪರ್ಯವಾಗಿ ಮೈಲಾರದೇವರ ಭಂಡಾರದ ಅಧಿಕಾರಿಗಳಾಗಿ ವಿಜಯನಗರ ಸಂಗಮ ವಂಶದ ಅರಸರ ಆಳ್ವಿಕೆಯವರೆಗೆ ಕಾರ್ಯನಿರ್ವಹಿಸಿದ್ದಂತೆ ತಿಳಿದುಬರುತ್ತದೆ. ಬಹುಶಃ ಸಂಗಮವಂಶದ ಅರಸರ ನಂತರ ಬಂದ ವಿಜಯನಗರ ಅರಸರು ಗಂಗರಸನ ವಂಶದವರನ್ನು ಮೈಲಾರದೇವರ ಭಂಡಾರದ ಅಧಿಕಾರಿ ಹುದ್ದೆಯಲ್ಲಿ ಮುಂದುವರೆಸಿದಂತೆ ಕಾಣುವುದಿಲ್ಲ. ಏಕೆಂದರೆ ಕ್ರಿ. ಶ. 1518ರ ಶ್ರೀಕೃಷ್ಣದೇವರಾಯನ ಮೈಲಾರದ ಶಾಸನದಲ್ಲಿ ಗಂಗರಸನ ವಂಶಜರ ಹೆಸರು ಪ್ರಸ್ತಾಪವಿಲ್ಲ. ('ಹೊಂನಿಸೆಟ್ಟಿನ ಮಗನ ನರಸಯ್ಯ ಆತನ ಹೆಂಡತಿ ಬಸಮ್ಮಗಳು' ಎಂಬ ಉಲ್ಲೇಖವಿದೆ.)

## ಕೊನೆಟಿಪ್ಪಣಿ:

1. ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ). ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1: ಬಳ್ಳಾರಿ ಜಿಲ್ಲೆ ಶಾ. ಸಂ. 29. ಪು.ಸಂ. 335
2. ಅದೇ. ಶಾ. ಸಂ. 27. ಪು.ಸಂ. 334
3. ಅದೇ. ಶಾ. ಸಂ. 28. ಪು.ಸಂ. 334
4. ಅದೇ. ಶಾ. ಸಂ. 29. ಪು.ಸಂ. 335
5. ಅದೇ. ಶಾ. ಸಂ. 30. ಪು.ಸಂ. 336
6. ಅದೇ. ಶಾ. ಸಂ. 31. ಪು.ಸಂ. 336

## ಆಕರ ಗ್ರಂಥ:


1. ದೇವರಕೊಂಡಾರೆಡ್ಡಿ ಮತ್ತು ಇತರರು (ಸಂ). (1998). ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–1. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.